# ಧರಂ ಮತ್ತು ಬೀಡಿ!

■ ಪ್ರವೀಣ ಕುಲಕರ್ಣಿ

ಬಾಲಿವುಡ್‌ನ ಸೂಪರ್ ಸ್ಟಾರ್‌ಗಳಲ್ಲಿ ಒಬ್ಬರೆನಿಸಿದ ಧರ್ಮೇಂದ್ರ ಇತ್ತೀಚೆಗೆ ವಿಭಿನ್ನ ಕಾರಣಕ್ಕೆ ಸುದ್ದಿಯಾದರು ಮತ್ತು ಆ ಸಂದರ್ಭದಲ್ಲಿ ಅವರು ಪ್ರತಿಕ್ರಿಯಿಸಿದ ರೀತಿಯಿಂದ ತಾವು ತೆರೆಯ ಆಚೆಗೂ ಸೂಪರ್ ಸ್ಟಾರ್ ಎಂದು ನಿರೂಪಿಸಿದರು. ಬಾಲಿವುಡ್ ಪ್ರೇಮಿಯೊಬ್ಬರು ಟ್ವಿಟರ್‌ನಲ್ಲಿ ಎರಡು ಅಪರೂಪದ ಚಿತ್ರಗಳನ್ನು ಹಾಕಿದ್ದರು. ಅದರಲ್ಲಿದ್ದ ಬೀಡಿ ಪಾಕೆಟ್‌ಗಳ ಮೇಲೆ ಹೇಮಾಮಾಲಿನಿ ಹಾಗೂ ಧರ್ಮೇಂದ್ರ ಅವರ ಚಿತ್ರಗಳಿದ್ದವು. 'ಅದೊಂದು ಕಾಲವಿತ್ತು. ಬೀಡಿ ಜಾಹೀರಾತಿನಲ್ಲೂ ಸೂಪರ್‌ಸ್ಟಾರ್‌ಗಳು ಕಾಣಿಸಿಕೊಳ್ಳುತ್ತಿದ್ದರು. ಈ ಚಿತ್ರಗಳಿಗೆ ಏನಾದರೂ ಉಲ್ಲಾಸಮಯ ಶೀರ್ಷಿಕೆ ನೀಡಿ' ಎಂದು ಆ ಅಭಿಮಾನಿ ಬರೆದಿದ್ದರು.

ಅದಕ್ಕೆ ಸ್ವತಃ ಧರ್ಮೇಂದ್ರ ಉತ್ತರ ನೀಡಿದ್ದರು. 'ಓಹ್, ಆಗ ಏನನ್ನೂ ಕೇಳದೆ ಯಾರು ಬೇಕಾದರೂ ಯಾವ ಚಿತ್ರವನ್ನಾದರೂ ಮುದ್ರಿಸಿಕೊಳ್ಳುತ್ತಿದ್ದರು, ಏನು ಮಾಡುವುದು ಪ್ರಶಾಂತ್‌ಜಿ (ಅಭಿಮಾನಿ). ನೀವೂ ಖುಷಿಯಾಗಿರಿ' ಎಂಬ ಪತ್ಯದ ಜತೆಗೆ ಹಸ್ತಲಾಘವದ ಇ ಮೋ ಜಿ ಯೂ ಆ ಉತ್ತರದ ಭಾಗವಾಗಿತ್ತು. ಅದಕ್ಕೆ ಮರು ಉತ್ತರ ನೀಡಿದ್ದ ಆ ಅಭಿಮಾನಿ, ' ದ ಯ ವಿ ಟ್ಟು ಕ್ಷಮಿಸಿ, ನಮಗೆ ಗೊತ್ತಿರಲಿಲ್ಲ. ಆಗ ಸ್ಟಾರ್‌ಗಳು ಇಂತಹ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುತ್ತಿದ್ದರು ಎಂದುಕೊಂಡಿದ್ದೆವು. ನಿಮ್ಮ ಸ್ಪಷ್ಟನೆಯಿಂದ ಎಲ್ಲವೂ ಅರಿವಿಗೆ ಬಂತು' ಎಂದು ಬರೆದಿದ್ದರು.

ಧರ್ಮೇಂದ್ರ ಹಾಗೂ ಹೇಮಾಮಾಲಿನಿ ಅವರದು ಆಗ ಬಾಲಿವುಡ್‌ನಲ್ಲಿ ತುಂಬಾ ಜನಪ್ರಿಯ ಜೋಡಿ ಎನಿಸಿತ್ತು. 'ಚಾಚಾ ಬತೀಜಾ', 'ನಯಾ ಜಮಾನಾ', 'ರಾಜಾ ಜಾನಿ', 'ದಿ ಬರ್ನಿಂಗ್ ಟ್ರೇನ್', ಆಸ್ ಪಾಸ್, ಸೀತಾ ಔರ್ ಗೀತಾ, ಶೋಲೆ ಸೇರಿದಂತೆ ಹಲವು ಯಶಸ್ವಿ ಚಿತ್ರಗಳಲ್ಲಿ ಈ ಜೋಡಿ ನಟಿಸಿತ್ತು. ಅದರಲ್ಲಿ 'ಶೋಲೆ' ಸಾರ್ವಕಾಲಿಕ ಅತ್ಯುತ್ತಮ ಚಿತ್ರಗಳಲ್ಲಿ ಒಂದೆನಿಸಿದೆ. 1980ರ ದಶಕದಲ್ಲಿ ಜಾಹೀರಾತು ಉದ್ಯಮ ಈಗಿನಷ್ಟು ಬೆಳೆದಿರಲಿಲ್ಲ. ಯಾವುದೇ ಉತ್ಪನ್ನಕ್ಕೆ ಸ್ಟಾರ್ ನಟರ ಚಿತ್ರಗಳನ್ನು ಹೇಳದೆ ಕೇಳದೆ ಬಳಕೆ ಮಾಡಲಾಗುತ್ತಿತ್ತು. ಮಹಾರಾಷ್ಟ್ರದ ಬೀಡಿ ಕಂಪನಿಯೊಂದು ತನ್ನ ಬೀಡಿ ಕಟ್ಟಿನ ಮೇಲುಹೊದಿಕೆಯ ಮೇಲೆ ಈ ತಾರಾಜೋಡಿಯ ಚಿತ್ರಗಳನ್ನು ಛಾಪಿಸಿತ್ತು. ಬಾಲಿವುಡ್‌ನ ಅತ್ಯಂತ ಯಶಸ್ವಿ ತಾರಾಜೋಡಿಗಳ ಪಟ್ಟಿಯಲ್ಲಿ ಸೇರಿದ ಧರ್ಮೇಂದ್ರ ಹಾಗೂ ಹೇಮಾಮಾಲಿನಿ ವಿವಾಹವಾಗಿದ್ದರು. ಅವರಿಗೆ ಇಶಾ ಮತ್ತು ಅಹಾನಾ ಎಂಬ ಇಬ್ಬರು ಪುತ್ರಿಯರಿದ್ದಾರೆ.

ಧರಂ ಡಿ ಯೊ ಲ್ ಎಂಬ ಯುವಕ ಧರ್ಮೇಂದ್ರ ಎಂದು ಖ್ಯಾತವಾಗಿದ್ದೇ ಒ ಂ ದು ರೋ ಚ ಕ ಕ ಥೆ . ಐ ದು ದಶಕಗಳ ತಮ್ಮ ಚಿತ್ರರಂಗದ ಜೀವನದಲ್ಲಿ 300ಕ್ಕೂ ಅಧಿಕ ಸಿನಿಮಾಗಳನ್ನು ಕೊಟ್ಟ ಸ್ಟಾರ್ ಅವರು. ರಾಜಕೀಯದಲ್ಲೂ ಒಂದು ಕೈ ನೋಡಿರುವ ಅವರು, ರಾಜಸ್ಥಾನದ ಬಿಕಾನೇರ್ ಕ್ಷೇತ್ರದ ಸಂಸದರಾಗಿದ್ದರು. ಪಾಕಿಸ್ತಾನಕ್ಕೆ ಕೂಗಳತೆಯ ದೂರದಲ್ಲಿರುವ ಲೂಧಿಯಾನ ಜಿಲ್ಲೆಯ ಪುಟ್ಟ ಹಳ್ಳಿಯಲ್ಲಿ ಜನಿಸಿದ ಧರಂ, ಜಾಟ್ ಸಮುದಾಯಕ್ಕೆ ಸೇರಿದವರು. ಅವರ ತಂದೆ ಕೇವಲ್ ಕಿಶನ್ ಸಿಂಗ್ ಶಾಲಾ ಮುಖ್ಯೋಪಾಧ್ಯಾಯರಾಗಿದ್ದರು.



ಚಿಕ್ಕವಯಸ್ಸಿನಲ್ಲೇ ಪ್ರಕಾಶ್ ಕೌರ್ ಅವರನ್ನು ಮದುವೆಯಾಗಿದ್ದ ಧರಂ, ನಾಲ್ಕು ಮಕ್ಕಳ ತಂದೆಯಾಗಿದ್ದರು. ಸನ್ನಿ ಮತ್ತು ಬಾಬಿ ಡಿಯೊಲ್ ಇದೇ ದಂಪತಿಯ ಪುತ್ರರು. ಮುಂದೆ ಚಿತ್ರರಂಗ ಸೇರಿದ ಮೇಲೆ ಹೇಮಾಮಾಲಿನಿಯನ್ನು ಅವರು ವರಿಸಿದರು. ಮೊದಲ ಪತ್ನಿಗೆ ಡೈವೋರ್ಸ್ ನೀಡದೆ ಇನ್ನೊಂದು ವಿವಾಹವಾಗುವ ಕಾರಣಕ್ಕಾಗಿ ಅವರು ಇಸ್ಲಾಂಗೆ ಮತಾಂತರಗೊಂಡಿದ್ದರು ಎಂಬ ಪುಕಾರು ಎದ್ದಿತ್ತು. ಆದರೆ, ತಾವು ಮತಾಂತರಗೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು.

ಧರಂ ಜತೆ ಶತ್ರುಘ್ನ ಸಿನ್ಹಾ, ಅಮಿತಾಬ್ ಬಚ್ಚನ್, ಜಿತೇಂದ್ರ ಹಾಗೂ ಕಪೂರ್ ಕುಟುಂಬದ ಸದಸ್ಯರ ಜತೆಗೆ ಹಲವು ಚಿತ್ರ ಮಾಡಿದ್ದಾರೆ. ಪ್ರತೀ ಚಿತ್ರದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ದಿಲಿಪ್‌ಕುಮಾರ್ ಜತೆ ವಿಶೇಷ ಸ್ನೇಹ ಹೊಂದಿದ್ದ ಅವರು, ದಿಲಿಪ್ ತೀರಿಹೋದಾಗ ಅವರ ಮುಖ ಹಿಡಿದು ಮೌನವಾಗಿ ರೋದಿಸಿದ್ದು ಅಭಿಮಾನಿಗಳ ಕಣ್ಣುಗಳಲ್ಲಿ ಅಚ್ಚಳಿಯದ ಛಾಪೊತ್ತಿದೆ. 'ಹೀ ಮ್ಯಾನ್' ಎಂದೇ ಖ್ಯಾತರಾಗಿರುವ ಅವರಿಗೆ ಹಲವು ಪ್ರಶಸ್ತಿಗಳೂ ಸಂದಿವೆ.

ದೀರ್ಘ ಬಿಡುವಿನ ನಂತರ ಧರಂ ಮತ್ತೆ ಬಣ್ಣ ಹಚ್ಚುತ್ತಿದ್ದಾರೆ. ಧರ್ಮ ಪ್ರೊಡಕ್ಷನ್ಸ್‌ನ 'ರಾಕಿ ಔರ್ ರಾಣಿ ಕೀ ಪ್ರೇಮ್ ಕಹಾನಿ' ಚಿತ್ರದಲ್ಲಿ ಅವರು ನಟಿಸುತ್ತಿದ್ದಾರೆ. ಅಲಿಯಾ ಭಟ್, ರಣವೀರ್ ಸಿಂಗ್, ಜಯಾ ಬಚ್ಚನ್, ಶಬನಾ ಆಜ್ಮಿ ಚಿತ್ರದ ತಾರಾಗಣದಲ್ಲಿರುವ ಇತರ ಪ್ರಮುಖರಾಗಿದ್ದಾರೆ. ತುಂಟತನಕ್ಕೆ ಹೆಸರಾದ ಧರ್ಮೇಂದ್ರ ನಟನೆಯಲ್ಲಿ ಪಾತ್ರದೊಳಗೆ ಪರಕಾಯ ಪ್ರವೇಶ ಮಾಡುವಷ್ಟು ಪಳಗಿದವರು. ಭಾರತದ ಯುವತಿಯರ ನಿದ್ದೆ ಕೆಡಿಸಿದ ಹೀರೊಗಳಲ್ಲಿ ಒಬ್ಬರಾಗಿದ್ದವರು. ಯಾರಿಗೆ ಗೊತ್ತು? ಅವರ ಹೊಸಚಿತ್ರದ ಪಾತ್ರ 1980ರ ದಶಕದ ಯುವತಿಯರ ಮೊಗದಲ್ಲಿ ಮಂದಹಾಸವೊಂದು ಮಿಂಚಿ ಮರೆಯಾಗುವಂತೆ ಮಾಡುವುದೇನೋ ಎಂದು! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65